MYSORE LEGISLATIVE ASSEMBLY.

Wednesday, 31st March 1965.

The House met in the Assembly Chamber, Vidhana Soudha Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Supply of Cement to Co-operative Societies and Private Agencies in Bijapur District

*Q.—485. Smt. SUSHILABAI SHAH (Bagewadi).—

Will the Government be pleased to state :—

(*a*) the quantity of cement supplied to the Co-operative Societies and Private Agencies in Bijapur District since two years ;

(*b*) the number of these Societies and agencies existing in the same district ;

(*c*) whether it has come to the notice of the Government that private agencies are not distributing the cement to the public properly ;

(*d*) if so, the action they propose to take in the matter ?

*A.—Sri K. MALLAPPA (Minister for Industries and Commerce).—

(*a*) 7,700 Metric Tonnes.

(*b*) Two Co-operative Societies and 21 private agencies.

(*c*) No

(*d*) Does not arise in view of the reply to the question (*c*).

ಶ್ರೀಮತಿ. ಸುಶೀಲಾಬಾಯಿ ಷಾ.—ತಾವು 21 ಖಾಸಗೀ ಏಜನ್ಸಿಗಳವರಿಗಾಗಿ ಸಿಮೆಂಟನ್ನು ಹಂಚುವುದಕ್ಕೆ ಬದಲಿಗೆ ಸಹಕಾರ ಸಂಘಗಳ ಮೂಲಕವೇ ಕೊಡುವುದಕ್ಕಾಗಿ ಏಕೆ ಏರ್ಪಾಡು ಮಾಡಬಾರದು ?

ಶ್ರೀ ಕೆ. ಮಲ್ಲಪ್ಪ.—ಏಜೆಂಟುಗಳನ್ನು ಸರಕಾರದವರು ನೇಮಕ ಮಾಡುತ್ತಿಲ್ಲ. ಇದನ್ನು ಸ್ಟೇಟು ಟ್ರೇಡಿಂಗು ಕಾರ್ಪೊರೇಷನ್ನಿನವರು ಒಪ್ಪಿಗೆ ಕೊಟ್ಟ ಮೇಲೆ ಸರಕಾರ ಇವರಿಗೆ ರೈಸನ್ನು ಗಳನ್ನು ಕೊಡುತ್ತದೆ.

ಶ್ರೀಮತಿ ಸುಶೀಲಾಬಾಯಿ ಷಾ.—ಸಿಮೆಂಟಿಗಾಗಿ ಪರ್ಮಿಟ್ಟುಗಳನ್ನು ತೆಗೆದುಕೊಂಡು ಹೋದರೂ ಅವರಿಗೆ ಸರಿಯಾಗಿ ಸಿಮೆಂಟು ಸಿಗುತ್ತಿಲ್ಲ. ಇದರ ಬಗ್ಗೆ ಸರಕಾರ ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ಕೆ. ಮಲ್ಲಪ್ಪ.—ಸಿಮೆಂಟು ಎಷ್ಟು ಬಂದಿದೆಯೋ ಅದನ್ನು ನೋಡಿಕೊಂಡು ಆಯಾ ಡೆಪ್ಯುಟೀ ಕಮೀಷನರವರು, ಅಸಿಸ್ಟೆಂಟು ಕಮೀಷನರವರು ಹಾಗೂ ತಹಶೀಲುದಾರರು ಇಷ್ಟು ಸಿಮೆಂಟು ಕೊಡಬಹುದು ಎಂದು ಪರ್ಮಿಟ್ಟನ್ನು ಕೊಡುತ್ತಾರೆ. ಆ ಪ್ರಕಾರ ಸಿಮೆಂಟು ಹಂಚಿಕೆ ಯಾಗುತ್ತದೆ.

ಶ್ರೀಮತಿ ನುಶೀರಾಬಾಯಿ ಪಾ.—50 ಮೂಟೆಗೆ ಸಿಮೆಂಟು ಪರ್ಮಿಟ್ಟು ಎಂದು ಕೊಟ್ಟಿದ್ದರೆ ಈ ಕಂಪೆನಿಗಳವರು 25 ಮೂಟೆ ಮಾತ್ರ ಕೊಡುತ್ತೇವೆ ಪೂರ್ತಿ 50 ಮೂಟೆಗಳೂ ಬಂದಿವೆ ಎಂದು ಬರದು ಕೊಡಿ ಎಂದು ಕೇಳುತ್ತಾರೆ. ಇದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಇಲ್ಲಿ ಸಿಮೆಂಟನ್ನು ಹಂಚುವುದಕ್ಕೆ ಖಾನಗಿ ಏಜಂಟರುಗಳಿಗೆ ಕೊಡುವುದಕ್ಕೆ ಬದಲಾಗಿ ಕಟ್ಟು ನಿಟ್ಟಾಗಿ ಸಹಕಾರ ಸಂಘಗಳ ಮೂಲಕವೇ ಸಿಮೆಂಟನ್ನು ಕೊಡುವುದಕ್ಕೆ ಏಕೆ ಏರ್ಪಾಡು ಮಾಡಬಾರದು.

ಶ್ರೀ ಕೆ. ಮಲ್ಲಪ್ಪ.—ಇದರ ಬಗ್ಗೆ ನಾನಾಗಲೇ ಹೇಳಿದೆ. ಸಾಮಾನ್ಯ ಟ್ರೇಡು ಚಾನಲ್ಲು, ಖಾನಗಿಯವರಲ್ಲಿ ನಡೆಯುತ್ತಿರುವುದನ್ನು ಡಿಸ್‌ಟರ್ಬ್ ಮಾಡಬಾರದು ಎಂದು ಸ್ಟೇಟು ಟ್ರೇಡಿಂಗು ಕಾರ್ಪೊರೇಷನ್ನಿನವರು ಸಿಮೆಂಟು ತಯಾರು ಮಾಡುವ ಕಂಪೆನಿಯವರ ಸಲಹೆ ಮೇರೆಗೆ ಎಷ್ಟು ಏಜೆಂಟರುಗಳು ಬೇಕು ಎನ್ನುವುದನ್ನು ನೋಡಿ ನೇಮಕ ಮಾಡುತ್ತಾರೆ. ಸರಕಾರದವರು ಏಜಂಟರು ಗಳನ್ನು ನೇಮಕ ಮಾಡುತ್ತಿಲ್ಲ. ಸರಕಾರದವರು ಏನಿವ್ವರೂ ಬರೀ ಲೈಸನ್ಸುಗಳನ್ನು ಮಾತ್ರ ಕೊಡುತ್ತಾರೆ. ಇದಕ್ಕೆ ಕಂಟ್ರೋಲರು ಒಬ್ಬರು ಇರುತ್ತಾರೆ.

ಶ್ರೀ ಟಿ. ಮಾದಯ್ಯ ಗೌಡ.—ಖಾನಗಿ ಏಜಂಟರುಗಳು ಸಿಮೆಂಟನ್ನು ತೆಗೆದುಕೊಂಡು ಮಾರು ವಾಗ ಅವರ ಮೇಲೆ ಸರಿಯಾದ ಒಂದು ಹತೋಟಿಯನ್ನು ಇಟ್ಟುಕೊಳ್ಳುವವರು ಯಾರು ? ಈ ನಂದರ್ಭದಲ್ಲಿ ಅವರ ಮೇಲೆ ಯಾರು ಹತೋಟಿ ಇಟ್ಟು ನೋಡಿಕೊಳ್ಳುತ್ತಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಇದನ್ನು ನೋಡಿಕೊಳ್ಳಲು ಕಂಟ್ರೋಲರ್ ಆಫ್ ಸಿವಿಲ್ ಸಪ್ಲೈಸ್ ನೋಡಿಕೊಳ್ಳುತ್ತಾರೆ. ಇದಲ್ಲದೆ ಡೆಪ್ಯುಟಿ ಕಮೀಷನರು, ಅಸಿಸ್ಟೆಂಟು ಕಮೀಷನರು ಹಾಗೂ ತಹಶೀಲುದಾರರುಗಳೂ ನೋಡಿಕೊಂಡು ಪರ್ಮಿಟ್ಟುಗಳನ್ನು ಕೊಡುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸಿಮೆಂಟು ಸಿಕ್ಕದೇ ಇರುವ ಈ ಕಾಲದಲ್ಲಿ ಕೊಡುವ ಸಿಮೆಂಟು ಚೀಲಗಳನ್ನು ಅಲ್ಲಂದ ಇಲ್ಲಿಗೆ ಎತ್ತಿ ಹಾಕುವುದರಿಂದಾಗಿ ತೆಗೆದುಕೊಳ್ಳುವಾಗ ಒಂದು ಮೂಟೆ ಸಿಮೆಂಟಿನಲ್ಲಿ ಅರ್ಧ ಭಾಗದಷ್ಟು ಆಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಸಾಗಿಸುವಾಗ ಸ್ವಲ್ಪ ಚೆಲ್ಲಿ ಹೋಗಬಹುದು. ಆದರೆ ಚೀಲದಲ್ಲಿ ಅರ್ಧ ಭಾಗದಷ್ಟು ಹೋಗುತ್ತಿದೆ ಎನ್ನುವುದು ಸರಿಯಲ್ಲ. ಸ್ವಲ್ಪ ನಷ್ಟವಾಗಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇನ್ನು ಮುಂದಾದರೂ ತೂಕ ಮಾಡಿ ಸರಿಯಾದ ಚೀಲ ಗಳಲ್ಲಿ ಸಿಮೆಂಟನ್ನು ಹಂಚುವ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಸಿಮೆಂಟು ಕಂಪೆನಿಯವರು ಸರಿಯಾಗಿರುವ ಚೀಲದಲ್ಲೇ ಸಿಮೆಂಟನ್ನು ತೂಕ ಮಾಡಿಯೇ ತುಂಬಿ ಕಳುಹಿಸುತ್ತಾರೆ. ಆದರೆ ಎಲ್ಲೋ ಕೆಲವು ವೇಳೆಗಳಲ್ಲಿ ಸ್ವಲ್ಪ ಚೆಲ್ಲಬಹುದು. ಅಲ್ಲದೆ ಇವನ್ನು ಸೀಲು ಮಾಡಿ ಕಳುಹಿಸುತ್ತಾರೆ. ಆದರೂ ತೂಕದಲ್ಲಿ ಕಡಿಮೆ ಮಾಡುವುದಕ್ಕಾಗುವುದಿಲ್ಲ. ಎಲ್ಲೋ ಸ್ವಲ್ಪ ಹೆಚ್ಚು ಕಡಿಮೆಯಾಗಬಹುದೆ.

Sri K. P. GADAG.—May I know whether the Agencies distribute cement to consumers direct or on the authority of the permit issued by Deputy Commissioner or any other Authority ?

Sri K. MALLAPPA.—Permits will be issued to the Consumers and the cement will be distributed by the stockists.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತೂಕ ಮಾಡಿ ಸಿಮೆಂಟು ಚೀಲಗಳನ್ನು ಕಳುಹಿಸುವುದ ರಿಂದ ನಷ್ಟವಾಗುವುದಿಲ್ಲ. ಇದರ ಬಗ್ಗೆ ಸರಕಾರ ತೂಕ ಮಾಡಲು ಏರ್ಪಾಡು ಮಾಡುತ್ತಾರೆಯೇ ?

Sri K. MALLAPPA.—It will take quite a lot of time for doing all that. The loss will be very little. The bag is closely woven. So the cement lost is comparatively very little.

ಶ್ರೀಮತಿ ರತ್ನಮ್ಮ ಮಾಧವರಾವ್.—ವಿಜಾಪುರ ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳಿವೆ ?

ಶ್ರೀ ಕೆ. ಮಲ್ಲಪ್ಪ.—12 ತಾಲ್ಲೂಕುಗಳಿವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸೀಲು ಹಾಕಿಯೇ ಸಿಮೆಂಟು ಮೂಟೆಗಳನ್ನು ಕಳುಹಿಸುತ್ತಾರೆ ಎಂದು ಹೇಳಿದಿರಿ. ಆದರೆ ಸೀಲು ಇದ್ದ ಹಾಗೇ ಇರುತ್ತದೆ. ನಕ್ಕರೆಗುತ್ತಿ ಹಾಕಿ ಸಿಮೆಂಟನ್ನು

ಹೊರಕ್ಕೆ ತೆಗೆದು ತೆಗೆದು ಬೇರೆ ಇಡುತ್ತಾರೆ. ಅಲ್ಲದೆ 50 ಮೂಟೆಗಳು ಬರುವ ಕಡೆ 25 ಮೂಟೆ ಗಳನ್ನು ಪರ್ಮಿಟ್ಟಿನಲ್ಲಿ ಕೊಟ್ಟು 50 ಮೂಟೆಯೂ ಕೊಟ್ಟಿದ್ದಾರೆಂದು ಬರೆಯುರಿ ಎಂದು ಹೇಳುತ್ತಾರೆ. ಇದನ್ನೆಲ್ಲಾ ಟೆಕ್ಕು ಮಾಡಲು ಸರಿಯಾದ ಲೆಕ್ಕಪತ್ರಗಳನ್ನಿಡಬೇಡವೇ ಮತ್ತು ಯಾರು ಸರಿಯಾಗಿ ಚೆಕ್ಕು ಮಾಡುತ್ತಿರುತ್ತಾರೆ ?

ಶ್ರೀ ಕೆ. ಮಲ್ಲಪ್ಪ.—ಲೆಕ್ಕಪತ್ರಗಳನ್ನು ಇಡಬೇಕೆಂದು ಮಾಡಲಾಗಿದೆ. ಆದರೆ ಸಕ್ಕರಗುತ್ತಿ ಯಿಂದ ಸಿಮೆಂಟು ತೆಗೆಯುತ್ತಾರೆ ಎನ್ನುವುದು ನನ್ನ ಗಮನಕ್ಕೆ ಬಂದಿಲ್ಲ. ಒಂದು ವೇಳೆ ಈ ರೀತಿ ಯಾರಾದರೂ ಡೀಲರುಗಳು ಸಿಮೆಂಟನ್ನು ಕದಿಯುತ್ತಿದ್ದಾರೆಂದು ನನ್ನ ಗಮನಕ್ಕೆ ತಂದರೆ ಅವರ ರೈಸನ್ನುಗಳನ್ನು ರದ್ದು ಮಾಡುವ ಅವಕಾಶವಿದೆ. ಅದರ ಬಗ್ಗೆ ಯಾವತರದ ಕಂಪ್ಲೇಂಟುಗಳೂ ನನಗೆ ಇದುವರೆಗೆ ಬಂದಿಲ್ಲ.

ಶ್ರೀ ಮಹಂತಸ್ವಾಮಿ.—ಸಿಮೆಂಟಿನ ಡಿಸ್ಟ್ರಿಕ್ಟು ಕೋಟಾವನ್ನು ಡೆಪ್ಯೂಟೀ ಕಮೀಷನರವರು ಕೊಡುವಾಗ ಅಯಾ ಅಸಿಸ್ಟೆಂಟು ಕಮೀಷನರು ತಹಶೀಲುದಾರರ ಮೂಲಕ ಕೊಡುವಾಗ ಅವು ಸಾಮಾನ್ಯ ರೈತರಿಗೆ ಸರಿಯಾಗಿ ಸಿಮೆಂಟು ಸಿಕ್ಕುತ್ತಿಲ್ಲ. ಇದರ ಬಗ್ಗೆ ಸರಕಾರ ತಕ್ಕ ಏರ್ಪಾಡು ಮಾಡುತ್ತದೆಯೇ ?

ಶ್ರೀ ಕೆ. ಮಲ್ಲಪ್ಪ.—ರೈತರಿಗೆ ಅನುಕೂಲ ಮಾಡುವ ದೃಷ್ಟಿಯಿಂದಲೇ ಡೆಪ್ಯುಟೀಕಮೀಷನರ ವರು ಮತ್ತು ಅಲ್ಲಿನ ತಹಶೀಲುದಾರರಿಗೆ ಸಿಮೆಂಟು ಕೊಡುವ ಅಧಿಕಾರ ಕೊಟ್ಟಿದೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಸಿಮೆಂಟು ಡೀಲರುಗಳಲ್ಲಿ ಆಗುತ್ತಿರುವ ನಷ್ಟವನ್ನು ತಪ್ಪಿಸ ಲಿಕ್ಕೆ ಸರಕಾರ ಸಿಮೆಂಟು ಡೀಲರುಗಳೊಳಗೆ ಯಾವುದೇ ತರಹದ ಒಂದು ಕೋಟಿಂಗ್‌ನ್ನು ಹಾಕಿ ಡೀಲ ರುಗಳನ್ನು ಕೊಟ್ಟರೆ ಅದರಿಂದ ಸೋರುವುದನ್ನು ತಪ್ಪಿಸುವುದಕ್ಕಾಗುತ್ತದೆಯಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಇಲ್ಲಿ ಎಲ್ಲ ಡೀಲರುಗಳೂ ಹಾಗಿರುವುದಿಲ್ಲ. ಇವೆಲ್ಲಾ ಚನ್ನಾಗಿ ಸಣ್ಣಗೆ ನೇಯ್ಗೆಯಾಗಿರುವ ಡೀಲರುಗಳು. ಸಿಮೆಂಟು ಡೀಲರುಗಳಿಂದ ಇಷ್ಟು ನಷ್ಟವಾಗಿದೆ ಎಂದು ಎಲ್ಲೂ ದೂರುಗಳು ನಮಗೆ ಬಂದಿಲ್ಲ. ಎಲ್ಲೋ ಕೊಂಚ ಅಲ್ಲಿಂದ ಇಲ್ಲಿಗೆ ಸಾಗಿಸುವಾಗ ಸ್ವಲ್ಪ ಮಟ್ಟಿಗೆ ಚೆಲ್ಲಿಹೋಗಿರಬಹುದು. ಇದಕ್ಕಾಗಿ ಸ್ಪೆಷಲ್ಲಾಗಿ ಹೊಲೆದಿರುವ ಸಿಮೆಂಟು ಡೀಲರುಗಳನ್ನು ಮಾಡಿರು ತ್ತಾರೆ, ಅದೂ ಕೂಡ ಬಹಳ ಹತ್ತಿರ ಹತ್ತಿರದಲ್ಲಿ ನೆಯ್ಗೆಯಾದವು. ಆದುದರಿಂದ ಇದರಿಂದ ಬರ ತಕ್ಕ ನಷ್ಟಗಳು ಅಲ್ಪಸ್ವಲ್ಪವಾಗುತ್ತದೆ ಅಷ್ಟೇ.

ಶ್ರೀ ಆರ್. ಎಲ್. ಲಕ್ಷ್ಮೀಪತಿ.—ಸಿಮೆಂಟು ಅಭಾವ ಜಾಸ್ತಿ ಇದೆ. ಅದಕ್ಕೆ ಯಾರಿಗೆ ಬೇಕೋ ಅವರಿಗೆ ನ್ಯಾಯವಾಗಿ ಸಿಗುತ್ತಿಲ್ಲ. ಸಿಮೆಂಟನ್ನು ಕಂಟ್ರೋಲು ಮಾಡುವುದಕ್ಕಿಂತ ಇದನ್ನು ಡೀ ಕಂಟ್ರೋಲು ಮಾಡಿದರೆ ಆಗ ಧಾರಾಳವಾಗಿ ಯಾರಿಗೆ ಬೇಕೋ ಅವರಿಗೆ ಸಿಮೆಂಟು ಸಿಗಲು ಅವಕಾಶವಾಗುತ್ತದೆ. ಆ ರೀತಿ ಡೀ ಕಂಟ್ರೋಲು ಮಾಡಲು ಪ್ರಯತ್ನ ಪಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಆ ಉದ್ದೇಶವಿಲ್ಲ.

ಶ್ರೀ ಎನ್. ಹುಚ್ಚೆಮಾಸ್ತಿಗೌಡ.—ಈ ಸೊಸೈಟಿಗಳಿಗೆ ಹೆಚ್ಚು ಕೋಟಾ ಕೊಡಬೇಕಾದ ಅವಶ್ಯಕತೆ ಇರುವುದರಿಂದ ನಮ್ಮ ಸ್ಟೇಟ್ ಸೀಮೆಂಟ್ ಕೋಟಾ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಈಗಾಗಲೇ ನಮಗಾರು 62,500 ಟನ್ ಬರುತ್ತಾ ಇದೆ. ದೇಶದಲ್ಲಿ ಸೀಮೆಂಟ್ ಉತ್ಪತ್ತಿ ಹೆಚ್ಚಾಗುವ ತನಕ ಸ್ಟೇಟ್ ಕೋಟಾ ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ಸೀಮೆಂಟ್ ಫ್ಯಾಕ್ಟರೀಜ ಹೆಚ್ಚು ಮಾಡಿದ್ದಾರೆ. ಹೆಚ್ಚು ಸೀಮೆಂಟ್ ದೊರೆಯಬೇಕೆಂದು ಕೇಂದ್ರ ಸರಕಾರವರು ಸೀಮೆಂಟ್ ಕಾರ್ಪೊರೇಶನ್ ಸ್ಥಾಪನೆ ಮಾಡಿದ್ದಾರೆ. ಸೀಮೆಂಟ್ ಉತ್ಪತ್ತಿ ಪ್ರಮಾಣ ಜಾಸ್ತಿ ಮಾಡಬೇಕೆಂಬ ಉದ್ದೇಶ ಇದೆ.